ಓಎಸ್ 175/2021

ಸಿಡಬ್ಲ್ಯೂ 1

**ಸಾಕ್ಷಿಯು ದಿಃ 09.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದ ಮಧ್ಯಂತರ ಆದೇಶದ ಮೇರೆಗೆ**

ದಾವ "ಎ" ಷಡ್ಯೂಲ್ ಸ್ವತ್ತಿನ ದಕ್ಷಿಣ ದಿಕ್ಕಿಗೆ ಪ್ರತಿವಾದಿ ಸುಧಾ ರವರ ಆಸ್ತಿ ಇರುವುದಿಲ್ಲ ಎಂದರೆ ಸಾಕ್ಷಿಯು ದಾವ ದಾವ "ಎ" ಷಡ್ಯೂಲ್ ಸ್ವತ್ತಿನ ದಕ್ಷಿಣ ದಿಕ್ಕಿಗೆ ಕರಿಯಯ್ಯ ಬಿನ್ ಚಿಕ್ಕ ಕರಿಯಯ್ಯ ರವರ ಪೂರ್ವ ಪಶ್ಚಿಮ 61 ಅಡಿ, ಉತ್ತರ ದಕ್ಷಿಣ 28 ½ ಅಡಿ ಆಸ್ತಿ ಇದ್ದು, ಆ ಪೈಕಿ ಪೂರ್ವ ಭಾಗದಲ್ಲಿ ಪೂರ್ವ ಪಶ್ಚಿಮ ಅಡಿ 33 ಅಡಿ, ಉತ್ತರ ದಕ್ಷಿಣ 28 ½ ಆಸ್ತಿಯನ್ನು 2ನೇ ಪ್ರತಿವಾದಿ ಸುಧಾ ರವರು ಖರೀದಿಸಿದ್ದು, ಕರಿಯಯ್ಯ ಬಿನ್ ಚಿಕ್ಕ ಕರಿಯಯ್ಯ ರವರ ಪಶ್ಚಿಮ ಭಾಗದ ಉಳಿಕೆ ಆಸ್ತಿಯಲ್ಲಿ ವಾಸ ಇದ್ದಾರೆ ಎಂದು ನುಡಿಯುತ್ತಾರೆ. ದಾವ "ಎ" ಷಡ್ಯೂಲ್ ಸ್ವತ್ತಿನ ಪೂರ್ವಕ್ಕೆ ವಾದಿಯ ತಂದೆ ಎಂ. ಬಸವಯ್ಯ ರವರಿಗೆ ಸೇರಿದ ಆಸ್ತಿ ಇದೆ ಎಂದರೆ ಸಾಕ್ಷಿಯು ಅದರಲ್ಲಿ ವಾದಿಯೇ ವಾಸ ಇದ್ದಾರೆ ಅದು ಯಾರ ಹೆಸರಿನಲ್ಲಿ ಇದೆ ಎಂದು ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವ "ಎ" ಷಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಇರುವ ವಾದಿಯ ತಂದೆ ಎಂ. ಬಸವಯ್ಯ ರವರ ಆಸ್ತಿ ಮತ್ತು ಸದರಿ ಆಸ್ತಿಯ ದಕ್ಷಿಣಕ್ಕೆ ಇರುವ 2ನೇ ಪ್ರತಿವಾದಿ ಸುಧಾ ರವರಿಗೆ ಸೇರಿದ ಆಸ್ತಿಯ ಮಧ್ಯ 4 ಅಡಿ ಅಗಲದ ಗಲ್ಲಿ ಇದೆ ಎಂದರೆ ಸಾಕ್ಷಿಯು ಆ ಗಲ್ಲಿಯನ್ನು ನಾನು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ.

2. ವಾದಿ ಮತ್ತು ಪ್ರತಿವಾದಿಯ ಆಸ್ತಿಯ ನಡುವೆ 2 ಅಡಿ ಅಗಲದ ಗಲ್ಲಿ ಇದೆ ಎಂದರೆ ಸರಿ. ನಿಪಿ 9 ಫೋಟೋದಲ್ಲಿ ಕಾಣುವ ಗಲ್ಲಿಯು 4 ಅಡಿ ಅಗಲ ಇದೆ ಎಂದರೆ ಸಾಕ್ಷಿಯು ನಾನು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪ 9 ರಲ್ಲಿ ಕಾಣುವ ಗಲ್ಲಿಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಓಡಾಡಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ 9 ಫೋಟೋ ತೋರಿಸಿ ಸದರಿ ಫೋಟೋದ ಗಲ್ಲಿಯಲ್ಲಿ ಕಾಣುವ ಶೌಚಾಲಯವನ್ನು ಗಲ್ಲಿ ಒತ್ತುವರಿ ಮಾಡಿ, ನಿರ್ಮಿಸಲಾಗಿದೆ ಎಂದರೆ ಸಾಕ್ಷಿಯು ಒತ್ತುವರಿ ಮಾಡಿಲ್ಲ, ಗಲ್ಲಿ ಬಿಡದೇ ಅವರ ಜಾಗದಲ್ಲಿ 2ನೇ ಪ್ರತಿವಾದಿ ಸುಧಾ ರವರು ವಾಸ ಇರುವ ಕರಿಯಯ್ಯ ರವರ ಜಾಗದಲ್ಲಿ ಬಾತ್ ರೂಮ್ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ 11 ಫೋಟೋದಲ್ಲಿ

ಕಾಣುವಂತೆ ಸಿಮೆಂಟ್ ಶೀಟ್ ಹಾಕಿರುವ ಶೌಚಾಲಯವನ್ನು ಪ್ರತಿವಾದಿಯು ಗಲ್ಲಿ ಬಿಡದೇ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅವರ ಜಾಗದಲ್ಲಿ ಅವರು ನಿರ್ಮಿಸಿಕೊಂಡಿದ್ದಾರೆ, ಗಲ್ಲಿ ಬಿಟ್ಟಿಲ್ಲ ಮತ್ತು ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ 13 ಫೋಟೋದಲ್ಲಿ ಕಾಣುವಂತೆ ಪ್ರತಿವಾದಿಯು ಗಲ್ಲಿಗೆ ನೀರು ಬಿಡುವುದರಿಂದ ವಾದಿಯ ಕಟ್ಟಡ ಶಿಥಿಲವಾಗುತ್ತದೆ ಮತ್ತು ಕಟ್ಟಡಕ್ಕೆ ತೊಂದರೆಯಾಗುತ್ತದೆ ಎಂದರೆ ಸಾಕ್ಷಿಯು ಈಗ ಪ್ರತಿವಾದಿಯು ಅಲ್ಲಿ ಒಂದು ಹನಿ ನೀರು ಬೀಳದಂತೆ ಪೈಪ್ ಹಾಕಿ ನೀರು ಉಪಯೋಗಿಸುತ್ತಿದ್ದು ನೀರು ನೇರವಾಗಿ ಚರಂಡಿಗೆ ಹೋಗುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

3. ಪ್ರತಿವಾದಿಯು ಗಲ್ಲಿಯಲ್ಲಿ ನೀರು ಬಿಟ್ಟರೆ ವಾದಿಗೆ ತೊಂದರೆಯಾಗುತ್ತದೆ ಎಂದರೆ ಸಾಕ್ಷಿಯು ನೀರು ಬಿಟ್ಟರೆ ತೊದರೆ ಯಾಗುತ್ತದೆ ಆದರೆ ನೀರು ಬಿಡಬಾರದು ಎಂದು ಪ್ರತಿವಾದಿಯು ಪೈಪ್ ಲೈನ್ ನ್ನು ಬೇರೆ ಕಡೆಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ನಲ್ಲಿಯನ್ನು ಚೆಂಜ್ ಮಾಡಿಲ್ಲ ಎಂದರೆ ಸಾಕ್ಷಿಯು ನಲ್ಲಿಯಲ್ಲಿ ಪೈಪ್ ಹಾಕಿಕೊಂಡು ಬೇರೆ ಕಡೆ ಬಳಸುತ್ತಿದ್ದಾರೆ ಮತ್ತು ನೀರನ್ನು ಪೈಪ್ ಹಾಕಿ ಚರಂಡಿಗೆ ಹೋಗುವಂತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ